ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್‌ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್: 230242

*ಸಂಪುಟ :25 *ಸಂಚಿಕೆ :12 * Udp/1263/2015-17 * R.NO. 50495/91 * ತಾರೀಕು 31–03–2015 * ರೂ 5/– * ವಾರ್ಷಿಕ ಚಂದಾ : 270/– ಅಂಚೆಯಲ್ಲಿ : 300/

## ಬಿಸ್ಲ್ ರಾಪ್ ಜೋರಾಯ್ತ್ ಮಾರಾಯ್ರೆ

### ದಾಹ.....ದಣಿವು....ನೀರಡಿಕೆ





ಸೂರ್ಯ ನೆತ್ತಿಮೇಲೆ ಕೂತ ಹಾಂಗೇ ಇತ್ತ..ಬಟ್ಟೆಯೆಲ್ಲಾ ಒದ್ದೆಯಾಗಿ ಹೋಯ್ತ್...ನೀರ್ ಕುಡ್ದು ಕುಡ್ದು ಸಾಕಾಯ್ತ್, ಬಾವಿ ನೀರ್ ಬತ್ತಿ ಹೋತಾ ಇತ್ತ್. ಬೆಳ್ಗಾತಿಗೆ ಮೋಡ...ಮಳೆ ಬತ್ತ್ತಾ ಕಾಣ್ಕು.....ಒಂಬತ್ತು ಘಂಟೆಗೆ ಸೆಕಿ ಸುರಾತ್ತ, ಮಧ್ಯಾಹ್ನ ಹೊತ್ತಿಗೆ ತಲಿ ತಿರ್‍ಗತ್ತ....ಇನ್ ಎರಡ್ ತಿಂಗ್ಳ ಕಳೀಕಲೆ"

ಹೆಚ್ಚುತ್ತಿರುವ ಬಿಸಿಲ ತಾಪಮಾನದಿಂದ ಸಂಕಟ ಪಡುತ್ತಿರುವ ಜನರು ಮಾತನಾಡುತ್ತಿರುವ ಪರಿ ಇದು.

ಕಳೆದ ಒಂದು ತಿಂಗಳಿಂದ ಸೆಕೆಗಾಲದ ಕೆಟ್ಟ ಅನುಭವವನ್ನು ಜನರು ಪಡೆಯುತ್ತಿದ್ದು, ಬದಲಾಗುತ್ತಿರುವ ವಾತಾವರಣದಿಂದ ಕಂಗೆಟ್ಟಿದ್ದಾರೆ. ಒಣಹವೆ, ಮೋಡ ಕವಿದ ವಾತಾವರಣ, ಬಿಸಿಲ ತಾಪ.....ನೀರಿನ ಅಭಾವ ಕರಾವಳಿಯಲ್ಲಿ ಕಂಡುಬರುತ್ತಿರುವ ಚಿತ್ರಣ.

ಅವಿಭಜಿತ ದ.ಕ.ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಕೆಲವೆಡೆ ಅಲ್ಲಲ್ಲಿ ಮಳೆ ಸುರಿದಿದ್ದು, ಉತ್ತರ ಭಾಗದಲ್ಲಿ ಮುಖ್ಯವಾಗಿ ಉಡುಪಿ ಜಿಲ್ಲೆಯಲ್ಲಿ ಇದರ ಪರಿಣಾಮ ಜನರ ಆರೋಗ್ಯದ ಮೇಲಾಗಿದೆ. ಮೋಡ ಕವಿದ ವಾತಾವರಣದಲ್ಲಿ ಉಂಟಾಗುವ ಸೆಕೆ, ಬಿಸಿಲು ಬಂದಂತೆ ಬೆಂಕಿ ಎದುರು ಕುಳಿತಂತೆ ಸಂಕಟ ಉಂಟುಮಾಡುತ್ತದೆ. ಕುಡಿಯುವ ನೀರಿನ ಬಳಕೆ ಎರಡು ತಿಂಗಳಿಂದ ಹೆಚ್ಚುತ್ತಾ ಇದ್ದು, ಮಾರ್ಚ್ ತಿಂಗಳು ತಂಪು ಪಾನೀಯ ಹಾಗೂ ಕಿತ್ತಳೆ, ಮೂಸುಂಬಿ, ಕರಬುಂಜ ಹಣ್ಣುಗಳಿಗೆ ಬಹಳ ಬೇಡಿಕೆ ಉಂಟಾಗಿದೆ. ಎಳನೀರು ವ್ಯವಹಾರ ಹೆಚ್ಚಾಗಿದೆ. ಮಜ್ಜಿಗೆಗೆ ಮಹತ್ವ ಬಂದಿದೆ.

ಕರಾವಳಿ ರಾಷ್ಟ್ರೀಯ ಹೆದ್ದಾರಿಯಲ್ಲಂತೂ ಮರಗಳೆಲ್ಲ ಮಾಯವಾದುದರಿಂದ ಒಣಹವೆ, ಧೂಳಿನ ವಾತಾವರಣದಲ್ಲಿ ಜನರು ಕಳವಳ ಪಡುವಂತಾಗಿದೆ. ರಸ್ತೆ ಬದಿಯಲ್ಲಿ ಮನೆ, ವ್ಯವಹಾರ ಇರುವವರ ಸ್ಥಿತಿ ಹೇಳತೀರದು.

ಗ್ರಾಮೀಣ ಪ್ರದೇಶದ ಹಲವೆಡೆ ಕುಡಿಯುವ ನೀರಿನ ಅಭಾವ ಕಂಡು ಬಂದಿದ್ದು, ದೂರದಿಂದ ನೀರು ಹೊತ್ತು ತರಬೇಕಾಗಿದೆ. ಸ್ಥಳೀಯ ಆಡಳಿತ ಸಂಸ್ಥೆಗಳು ಅಗತ್ಯ ಕ್ರಮ ಕೈಗೊಳ್ಳುತ್ತಿವೆ. ಆದರೂ ಇನ್ನೆರಡು ತಿಂಗಳು ಮದುವೆ, ರಜಾಕಾಲವಾಗಿದ್ದು ಪರ ಊರಿನಿಂದ ಬರುವ ಜನರಿಗೆ ಇಲಿಯ ವಾತಾವರಣ ಚಡಪಡಿಕೆ ಉಂಟು ಮಾಡುವುದಂತೂ ಖಂಡಿತ.

## ಕಾಶೀಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ನವತಿ ಮಹೋತ್ಸವ

### ಜಿಲ್ಲೆಯಿಂದ 1500 ಮಂದಿ ಹರಿದ್ವಾರಕ್ಕೆ



ಶ್ರೀ ಕಾಶೀಮಠಾಧೀಶ ಶ್ರೀಮದ್ ಸುಧೀಂದ್ರತೀರ್ಥ ಸ್ವಾಮೀಜಿಯವರ 90 ನೇ ಜನ್ಮ ನಕ್ಷತ್ರ ದಿನ ಆಚರಣೆ ಅಂಗವಾಗಿ ಹರಿದ್ವಾರದ ಕಾಶೀಮಠದ ಶ್ರೀ ವ್ಯಾಸಾಶ್ರಮ ಪುಣ್ಯಕ್ಷೇತ್ರದಲ್ಲಿ ಎ. 6 ರಂದು ಏರ್ಪಡಿಸಿರುವ "ನವತಿ" ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಕರಾವಳಿಯ ಉಡುಪಿ, ದ.ಕ. ಜಿಲ್ಲೆಗಳಿಂದ 1500 ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ.

ಈಗಾಗಲೇ 1100 ಮಂದಿ ಭಕ್ತಾಭಿಮಾನಿಗಳಿಗಾಗಿ ವಿಶೇಷ ರೈಲು ಮಂಗಳೂರಿನಿಂದ ಎ. 2 ರಂದು ಹೊರಡಲಿದೆ. ಅನಂತರ ವಿಮಾನ, ಬಸ್ಸು, ಕಾರು ಮುಂತಾದ ವಾಹನಗಳಲ್ಲಿ ಸುಮಾರು 400 ಕ್ಕೂ ಹೆಚ್ಚು ಮಂದಿ ಹರಿದ್ವಾರಕ್ಕೆ ತೆರಳಿದ್ದಾರೆ.

ಹರಿದ್ವಾರದಲ್ಲಿ ಕಾಶೀಮಠಾಧೀಶರ ಶಿಷ್ಯ ವೃಂದದವರಿಗಾಗಿ ಉಳಿದುಕೊಳ್ಳಲು ಉತ್ತಮ ವಸತಿ, ಊಟೋಪಚಾರ ವ್ಯವಸ್ಥೆ ಮಾಡಲಾಗಿದೆ ಎಂದು ನವತಿ ಮಹೋತ್ಸವದ ಸಮಿತಿಯ ಪರವಾಗಿ ಕೆ.ದಿನೇಶ ಕಾಮತ್ ತಿಳಿಸಿದ್ದಾರೆ. ಈಗಾಗಲೇ 3,000 ವಸತಿ ಗೃಹಗಳ ವ್ಯವಸ್ಥೆ ಆಗಿದೆ ಎಂದು ಹೇಳಿರುವ ಅವರು ಯೋಜನಾಬದ್ಧವಾಗಿ ಕಾರ್ಯಕ್ರಮ ರೂಪಿಸಲಾಗಿದೆ. ಇದೊಂದು ಅಪೂರ್ವ ಕಾರ್ಯಕ್ರಮ ಎಂದು ಬಣ್ಣಿಸಿದ್ದಾರೆ.

ಸ್ವಾಮೀಜಿಯವರ ಜೀವನದ ಸಂಪೂರ್ಣ ಚಿತ್ರಣ ಹೊಂದಿರುವ "ಶ್ರೀ ಗುರುದರ್ಶನಂ" ಎಂಬ ಅದ್ಭುತವಾಗಿ ಮುದ್ರಣಗೊಂಡಿರುವ ಕೃತಿ ದಿನಾಂಕ 6 ರಂದು ಬಿಡುಗಡೆಯಾಗಲಿದೆ. ಎ. 4 ರಿಂದ 6 ರ ತನಕ ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು ಕಾಶೀಮಠದ ಅಂತರ್ಜಾಲ www.kashimath.in ನಲ್ಲಿ ನೇರ ಪ್ರಸಾರವಿದೆ.

## ಕುಂದಾಪುರ ಪೇಟೆ ಶ್ರೀ ವೆಂಕಟರಮಣ ರಥೋತ್ಸವ



ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವ ತಾ.28ರಂದು, ಶ್ರೀ ರಾಮನವಮಿಯಂದು ವಿಜೃಂಭಣೆಯಿಂದ ನಡೆಯಿತು.

ಆಡಳಿತ ಮೊಕ್ತೇಸರ ಕೆ.ರಾಧಾಕೃಷ್ಣ ಶೆಣೈ ನೇತೃತ್ವದ ಆಡಳಿತ ಮಂಡಳಿ, ಹತ್ತುಸಮಸ್ತರು, ಜಿ.ಎಸ್.ಬಿ ಸಮಾಜ ಬಾಂಧವರ ಕೂಡುವಿಕೆಯೊಂದಿಗೆ ರಥೋತ್ಸವ ಸಮಾರಂಭಗಳು ಯಶಸ್ವಿಯಾಗಿ ನಡೆದವು. ತಾ.24 ರಿಂದ 29ರ ತನಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ತಾ.28 ರಂದು ರಾತ್ರಿ ಕುಂದಾಪುರ ಪೇಟೆಯಲ್ಲಿ ರಥೋತ್ಸವ ಮೆರವಣಿಗೆ ವೈಭವದಿಂದ ನಡೆಯಿತು. ತಾ 29 ರಂದು ಓಕುಳಿ ಉತ್ಸವ ನಡೆಯಿತು.

## ಶಂಕರನಾರಾಯಣ ಹೋಬಳಿ ನಿರ್ಲಕ್ಷ್ಯ ಜನರ ತೀವ್ರ ಅಸಮಾಧಾನ

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರಕಾರ ರಾಜ್ಯ ಬಜೆಟ್ ಮಂಡಿಸಿದ್ದು ಶಂಕರನಾರಾಯಣ ಹೋಬಳಿ ಘೋಷಣೆ ಮಾಡದಿರುವುದು ಜನರಿಗೆ ತೀವ್ರ ಅಸಮಾಧಾನ ಉಂಟು ಮಾಡಿದೆ. ಶಂಕರನಾರಾಯಣ ತಾಲೂಕು ಹೋರಾಟ ಸಮಿತಿಯು ಬಜೆಟ್‌ಗೆ ಮುನ್ನ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರನ್ನು ಭೇಟಿಯಾದಾಗ ಶಂಕರನಾರಾಯಣಕ್ಕೆ ನಕ್ಸಲ್ ಪೀಡಿತ ಪ್ರದೇಶಗಳು ಸೇರಿ ಸುಮಾರು 30 ಗ್ರಾಮಗಳನ್ನು ಸೇರಿಸಿ ನೂತನ ಹೋಬಳಿ ಕೇಂದ್ರ ರಚನೆ ಮಾಡುವುದಾಗಿ ಖಚಿತ ಭರವಸೆಯನ್ನು ನೀಡಿದ್ದರು.

ಮೂಡೂರು, ಹಳ್ಳಿಹೊಳೆ ಗ್ರಾಮಗಳು ಬೈಂದೂರು ಹೋಬಳಿ ವ್ಯಾಪ್ತಿಯಲ್ಲಿರುವುದರಿಂದ ಈ ಭಾಗದ ಜನರಿಗೆ ತಮ್ಮ ಸರಕಾರಿ ಕೆಲಸಗಳಿಗೆ ಸಾಕಷ್ಟು ತೊಂದರೆಯಾಗುತ್ತಿದ್ದು ಅದೇ ರೀತಿ ಮಚ್ಚಟ್ಟು, ಹಳ್ನಾಡು, ಕಾವ್ರಾಡಿ ಗ್ರಾಮಗಳಿಗೆ ಬಹುದೂರದ ಪ್ರಸ್ತುತ ವಂಡ್ಸೆ ಹೋಬಳಿಯಿಂದ ಇನ್ನಷ್ಟು ತೊಂದರೆಗಳಾಗುತ್ತಿವೆ. ಹಾಗೂ ಶೇಡಿಮನೆ, ಮಡಾಮಕ್ಕಿ ಹೆಂಗವಳ್ಳಿ ಗ್ರಾಮದವರಿಗೆ ಕುಂದಾಪುರ ಹೋಬಳಿ ಬಹುದೂರವಾಗಿದ್ದು, ಈ ಎಲ್ಲಾ ಗ್ರಾಮಗಳ ಜನರು ಶಂಕರನಾರಾಯಣ ನೂತನ ಹೋಬಳಿ ಬಗ್ಗೆ ಸಾಕಷ್ಟು ಭರವಸೆ ಹೊಂದಿದ್ದರು. ಆದರೆ ನೂತನ ಹೋಬಳಿ ಬಜೆಟ್‌ನಲ್ಲಿ ಮಂಡನೆಯಾಗಿದ್ದ ಬಗ್ಗೆ ಈ ಭಾಗದ ಜನರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಶಂಕರನಾರಾಯಣ ಹೋಬಳಿಯ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಶಂಕರನಾರಾಯಣ ತಾಲೂಕು ಹೋರಾಟ ಸಮಿತಿಯು ಭೇಟಿ ನೀಡಿ ಪ್ರಸ್ತುತ ಶಂಕರನಾರಾಯಣ ನೂತನ ಹೋಬಳಿ ಯಿಂದ ಈ ಗ್ರಾಮಗಳಿಗೆ ಆಗುವ ಪ್ರಯೋಜನಗಳ ಬಗ್ಗೆ ಸದ್ಯದಲ್ಲಿಯೇ ಮನವರಿಕೆ ಮಾಡಿ ಸರಕಾರದ ಮೇಲೆ ಒತ್ತಡ ಹೇರುವಂತೆ ಒತ್ತಾಯ ಮಾಡಲಾಗುವುದು ಎಂದು ಸಮಿತಿ ತಿಳಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವರಾದ ವಿನಯಕುಮಾರ್ ಸೊರಕೆಯವರ ಮುಖಾಂತರ ಮಾನ್ಯ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರನ್ನು ಇನ್ನೊಮ್ಮೆ ಭೇಟಿ ಮಾಡಲಿರುವುದಾಗಿ ಶಂಕರನಾರಾಯಣ ತಾಲೂಕು ಹೋರಾಟ ಸಮಿತಿಯ ಪದಾಧಿಕಾರಿಗಳಾದ ಚಟ್ಟೆ ರಾಜಗೋಪಾಲ ಹೆಗ್ಡೆ, ಆವರ್ಸೆ ರತ್ನಾಕರ ಶೆಟ್ಟಿ, ವಿಶ್ವನಾಥ ಶೆಟ್ಟಿ, (ನಿವೃತ್ತ ಮುಖ್ಯೋಪಾಧ್ಯಾಯರು) ತಲಾರಿ ನರಸಿಂಹ ಭಟ್, ಚಂದ್ರ ಶೇಖರ ಶೆಟ್ಟಿ ನಾಗೇಶ್ವಂದ್ರ ಭಟ್, ಸುಧಾಕರ ಕುಲಾಲ , ಪಾರ್ವತಿ ಕುಲಾಲ್ತಿ, ನಾರಾಯಣ ಶೆಟ್ಟಿಗಾರ, ಉಮೇಶ ರಾವ್, ರಮೇಶ ಕನ್ನಂತ, ರಾಜೇಶ್ ಹೆಬ್ಬಾರ, ಮಚ್ಚಟ್ಟು ಶ್ರೀನಿವಾಸ ಪೂಜಾರಿ, ಉಳ್ಳೂರು ರೋಹಿತ ಕುಮಾರ ಶೆಟ್ಟಿ, ದಿನೇಶ ಪೂಜಾರಿ ಉಳ್ಳೂರು, ರತ್ನಾಕರ ಶೆಟ್ಟಿ ಮದುರಬಾಳು, ಶ್ಯಾನ್‌ಕಟ್ಟು ಭಾಸ್ಕರ ಶೆಟ್ಟಿ, ಕೈಯಾಣಿ ರಾಜೀವ ಶೆಟ್ಟಿ, ವಿಘ್ನೇಶ ನಾಯಕ್ ಉಳ್ಳೂರು ಮುಂತಾದವರು ತಿಳಿಸಿದ್ದಾರೆ.

## ಕರ್ನಾಟಕ ಮಾಹಿತಿ ಆಯೋಗದ ಎದುರು ತನಿಖೆಗೆ ಹಾಜರಾಗಲು ಕುಂದಾಪುರ ತಹಶೀಲ್ದಾರ್‌ಗೆ ಸೂಚನೆ

ಕುಂದಾಪುರದ ತಹಶೀಲ್ದಾರ್ ಅವರು ಕುಂದಾಪುರ ತಾಲ್ಲೂಕು ಮಚ್ಚಟ್ಟು ಗ್ರಾಮದ ಅಶೋಕ್ ಶೆಟ್ಟಿಗಾರ್ ಅವರ ಮೇಲ್ಮನವಿಯ ಬಗ್ಗೆ ಮಾಹಿತಿ ಆಯೋಗಕ್ಕೆ ಸಮಜಾಯಿಷಿ ನೀಡದಿರುವುದು, ವಿಚಾರಣೆಗೆ ಹಾಜರಾಗದಿರುವುದು ಹಾಗೂ ಕೋರಿದ ಮಾಹಿತಿಯನ್ನು ನೀಡಲು ಮಾಹಿತಿ ಆಯೋಗದಿಂದ ಆದೇಶವಾಗಿದ್ದರೂ ಕ್ರಮ ಕೈಗೊಳ್ಳದಿಲ್ಲವಾದುದ ರಿಂದ ಅವರಿಗೆ ಎಪ್ರಿಲ್ 1 ರಂದು ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು ಇದರ ರಾಜ್ಯ ಮಾಹಿತಿ ಆಯುಕ್ತರ ಎದುರು ತನಿಖೆಗೆ ಹಾಜರಾಗಿ ಖುದ್ದಾಗಿ ಮಾಹಿತಿ ನೀಡಲು ಉಡುಪಿ ಜಿಲ್ಲಾಧಿಕಾರಿ ಸೂಚಿಸಿದ್ದಾರೆ. (6ನೇ ಪುಟಕ್ಕೆ)

AXIS BANK
Main Road, Near Abharana
Kundapura
Enjoy all modern Banking Facilities
at your Doorstep
Now 24 Hours Cash Deposit Service Available.
For Free Personalized Service
Please Call 8095511181
08254-235601 /2 /3

Saraswathi Group Of Institutes
1st Floor, Sri Ganesh Prasad, West Block Road, Kundapura- 576201
Ph: 9916034605, 9964069267
Join the No. 1 Coaching class of Kundapura and get unparallel results
JEE/AIPMT FOUNDATION COURSE FOR 10th STD
Admission Open for Vaction Crash Course !!!
► Starts on 2nd April.
► Suitable for State Board/CBSE/ICSE syllabus.
► Covers Topics for NTSE/Olympiads.
► Trained Excellent Faculty.
For Registration Visit
www.sginstitutes.com
OR
Call us @ 9916034605/9964069267 Mail us @ sginstitutes@gmail.com
Follow us on
FB: www.facebook.com/sginstitutes Twitter : www.twitter.com/sginstitutes